ಅಂಗಳದ ಅಂಚಿನಲ್ಲಿ ಹೂಗಿಡಗಳ ಸಾಲಿನಲ್ಲಿ ನಂದಿ ಬಟ್ಟಲು ಹೂವಿನ ಗಿಡವನ್ನೂ ಬೆಳೆಸಿ. ಇದರ ಹೂವಿನ ಸುವಾಸನೆ, ಗಾಳಿ ಆರೋಗ್ಯಕ್ಕೂ ಒಳ್ಳೆಯದು. ಮೈತುಂಬ ಹೂಬಿಡುವ ಈ ಗಿಡ ಮನೆಯಂಗಳಕ್ಕೂ ವಿಶೇಷ ಕಳೆ ತರಬಲ್ಲದು.



# ಹಾಲು ಬಣ್ಣದ ನಂದಿಬಟ್ಟಲು

■ ಯು. ಅನಂತ್

ಅಂಗಳದ ಬದಿಯಲ್ಲಿ ನೆಟ್ಟರೆ ತನ್ನಿಂದ ತಾನಾಗೇ ಹೆಚ್ಚಿನ ಆರೈಕೆ ಇಲ್ಲದೆ ಬೆಳೆಯುವ ಗಿಡ ನಂದಿ ಬಟ್ಟಲು. ಹಾಲು ಬಿಳುಪಿನ, ಗಿಡ ತುಂಬ ಮೊಸರು ಚೆಲ್ಲಿದಂತೆ ಹೂವು ಬಿಡುವ ನಂದಿ ಬಟ್ಟಲು ದಿನನಿತ್ಯದ ದೇವರ ಪೂಜೆಗೆ ಹೂವಿನ ಸಮಸ್ಯೆಯನ್ನು ನೀಗಿಸುವ ಸುಂದರ, ಸುಗಂಧಿತ ಪುಷ್ಪವನ್ನು ನೀಡುವ ಸಸ್ಯ ಸಂಜೀವಿನಿ.

ಮನೆಯಂಗಳ ಅಲ್ಲದೆ ಬೇಲಿ ಬದಿ, ಪಾರ್ಕ್‌ಗಳಲ್ಲೂ ಸುಲಭವಾಗಿ ಬೆಳೆಯುವ ನಂದಿಬಟ್ಟಲು ಗಿಡ ಬೆಳಗ್ಗಿನ ಹೊತ್ತಿಗೆ ಹೂವು ಅರಳುತ್ತದೆ. ಗಿಡ ತುಂಬ ಅರಳಿ ನಿಂತ ಹೂವುಗಳನ್ನು ಕೀಳುವ ಮನಸ್ಸಾಗದಿದ್ದರೂ ದೇವರ ಪೂಜೆಗೆ ಎಂಬ ಸಮಾಧಾನ ಹೂವು ಕಿತ್ತು ಹೂಬುಟ್ಟಿ ತುಂಬಿಸಲು ಪ್ರೇರೇಪಿಸುತ್ತದೆ.

ನೋಡಲು ಆಕರ್ಷಕ, ಹಲವಾರು ಔಷಧೀಯ ಗುಣಗಳನ್ನೂ ತನ್ನ ಒಡಲಲ್ಲಿ ತುಂಬಿರುವ ನಂದಿಬಟ್ಟಲು ಗಿಡ ಎಲ್ಲರೂ ತಮ್ಮ ತಮ್ಮ ಮನೆಯಂಗಳದಲ್ಲಿ ಬೆಳೆಸಲೇ ಬೇಕಾದ ಸಸ್ಯ.

## ಬಹೂಪಯೋಗಿ

ನಂದಿ ಬಟ್ಟಲಿನ ಉಪಯೋಗ ಹಲವು. ಇದರ ಎಸಳುಗಳನ್ನು ಬಳಸಿ ಕಣ್ಣಿಗೆ ಹಚ್ಚುವ ಕಾಡಿಗೆ ತಯಾರಿಸಬಹುದು. ನೈಸರ್ಗಿಕವಾಗಿರುವುದರಿಂದ ಈ ಕಾಡಿಗೆ ಹಚ್ಚಿಕೊಂಡರೆ ಕಣ್ಣು ಉರಿ ಬರುವುದಿಲ್ಲ. ಹೀಗಾಗಿ ಇದೊಂದು ಸುಂದರ ಸೌಂದರ್ಯವರ್ಧಕ. ಇದರಿಂದ ಕ್ರೀಮ್ ಕೂಡ ತಯಾರಿಸಬಹುದು. ಇದರಿಂದ ತಯಾರಿಸುವ ಸ್ಪ್ರೇ ಕ್ರಿಮಿಕೀಟಗಳ ನಿವಾರಣೆಗೆ ಸಹಕಾರಿ.



ಕ್ರೇಪ್ ಜಾಸ್ಮಿನ್, ಕ್ರೇಪ್ ಗಾರ್ಡೇನಿಯ, ಪಿನ್ ವೀಲ್ ಫ್ಲವರ್, ಮೂನ್‌ಬೀಮ್ ಮುಂತಾದ ಹೆಸರುಗಳಿಂದ ಕರೆಯಲಾಗುವ ನಂದಿಬಟ್ಟಲು ಮಂಜೊಟ್ಟಿ, ನಂಜ ಬಟ್ಟಲು ಮುಂತಾದ ಸ್ಥಳೀಯ ಹೆಸರುಗಳನ್ನೂ ಹೊಂದಿದೆ. ತಮಿಳಿನಲ್ಲಿ ನಂದಿಯರ್ ವಟ್ಟೈ, ಗುಜರಾತಿ ಭಾಷೆಯಲ್ಲಿ ಸಾಗರ್ ಎಂಬ ಹೆಸರೂ ಇದೆ. ಕೆಲವು ನಂದಿ ಬಟ್ಟಲು ಐದು ಎಸಳುಗಳಿಂದ ಕೂಡಿದ್ದರೆ ಇನ್ನೂ ಕೆಲವು ಹಲವು ದಳಗಳಿಂದ ಕೂಡಿ ದಟ್ಟವಾದ ಹೂವು ಆಗಿ ಅರಳುತ್ತದೆ. ಇದಕ್ಕೆ ಜಡೆ ಮಂಜೊಟ್ಟಿ ಅಥವಾ ಗ್ರ್ಯಾಂಡಿಪ್ಲೋಲಿಯ ಎಂದೂ ಕರೆಯುವರು. ಸಸ್ಯಶಾಸ್ತ್ರೀಯವಾಗಿ 'ಟ್ಯಾಬರ್‌ನೇಮೊಂಟಾನ ದೈವರೀಕಾ' ಎಂದು ಕರೆಯುವ ಈ ಸಸ್ಯದ ವೈಜ್ಞಾನಿಕ ಹೆಸರು ಅಪೊಸೀನೇಸಿ. ಇದರ ತವರೂರು ಭಾರತ.

ಸಾಮಾನ್ಯವಾಗಿ ಈ ಗಿಡ 8ರಿಂದ 15 ಅಡಿ ಎತ್ತರದವರೆಗೆ ಮತ್ತು ಆರು ಅಡಿ ಅಗಲದ ವಿಸ್ತೀರ್ಣದಲ್ಲಿ ಬೆಳೆಯುತ್ತದೆ. ಹಚ್ಚ ಹಸುರು ಬಣ್ಣದ ಎಲೆ 3ರಿಂದ 6 ಇಂಚು ಉದ್ದ ಮತ್ತು ಎರಡು ಇಂಚು ಅಗಲ ಇರುತ್ತದೆ. ಇದರ ಹಣ್ಣು ಕಿತ್ತಳೆ ಬಣ್ಣದ್ದಾಗಿರುತ್ತದೆ. ಇದರ ರೆಂಬೆಗಳನ್ನು ಕತ್ತರಿಸಿ ಮಣ್ಣಿನಲ್ಲಿ ನೆಟ್ಟರೆ ಅದಕ್ಕೆ ಬೇರು ಬಂದು ಹೊಸ ಗಿಡವಾಗುತ್ತದೆ. ಬಿಸಿಲಿನಲ್ಲೂ ಬೆಳೆಯುತ್ತದೆ; ಕೊಂಚ ನೆರಳಿದ್ದರೂ ಸೊಂಪಾಗಿ ಬೆಳೆಯುವ ಸಸ್ಯ ಇದು.

ಅಂಗಳದ ಅಂಚಿನಲ್ಲಿ ಹೂಗಿಡಗಳ ಸಾಲಿನಲ್ಲಿ ನಂದಿ ಬಟ್ಟಲು ಹೂವಿನ ಗಿಡವನ್ನೂ ಬೆಳೆಸಿ. ಇದರ ಹೂವಿನ ಸುವಾಸನೆ, ಇದರ ಗಾಳಿ ಆರೋಗ್ಯಕ್ಕೂ ಒಳ್ಳೆಯದು. ■